<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಢಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.</u>

**<u>ಸಿ.ಸಿ. ಸಂಖ್ಯೆ.28/2022</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | ರಾಜೇಂದ್ರ | ಸಿ.ಡಬ್ಲ್ಯೂ: 11 | ಪಿ.ಡಬ್ಲ್ಯೂ: 6 |
| ತಂದೆಯ ಹೆಸರು | ವೆಂಕಟರಮಣ | | |
| ವಯಸ್ಸು | 40 ವರ್ಷ | | |
| ಉದ್ಯೋಗ | ಪಿ.ಸಿ. ಮೂಡಿಗೆರೆ ಪೊಲೀಸ್ ಠಾಣೆ | | |
| ವಾಸ ಸ್ಥಳ | ಮೂಡಿಗೆರೆ | | |

ದಿನಾಂಕ: 21.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಮುಖ್ಯ ವಿಚಾರಣೆ ಸ.ಸ.ಅ.ರವರಿಂದ:</u>**

1. ನಾನು 5 ವರ್ಷಗಳ ಕಾಲ ಬಣಕಲ್ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ನಾನು ಈ ಕೇಸಿನ 4 ಜನ ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ದಿ: 27.08.2015 ರಂದು ಚಾಸಾ.13 ರವರು, ಚಾಸಾ.12 ನನ್ನನ್ನು ಮತ್ತು ಚಾಸಾ.10 ರವರನ್ನು ಆರೋಪಿತರನ್ನು ಪತ್ತೆ ಮಾಡಲು ನೇಮಕ ಮಾಡಿದ್ದು, ಅದರಂತೆ ನಾನು, ಚಾಸಾ.12 ಮತ್ತು ಚಾಸಾ.10 ರವರು ದಿ: 28.08.2015 ರಂದು ಮೂಡಿಗೆರೆ ಪಟ್ಟಣದಲ್ಲಿ ಆರೋಪಿಗಳನ್ನು ಪತ್ತೆ ಮಾಡುತ್ತಿರುವಾಗ 1 ರಿಂದ 3 ನೇ ಆರೋಪಿತರು ಬೆಳಿಗ್ಗೆ 6.30 ರ ಸುಮಾರಿಗೆ ನಮಗೆ ಪತ್ತೆಯಾಗಿರುತ್ತಾರೆ. ನಂತರ ಆ ಮೂರು ಜನ ಆರೋಪಿಗಳನ್ನು ಬಣಕಲ್ ಪೊಲೀಸ್ ಠಾಣೆಗೆ ಬೆಳಿಗ್ಗೆ 7.00 ಗಂಟೆಯ ಸುಮಾರಿಗೆ ಚಾಸಾ.13 ರವರ ಮುಂದೆ ಹಾಜರು ಪಡಿಸಿರುತ್ತೇನೆ. ಅದೇ ದಿನ 1 ರಿಂದ 3 ನೇ ಆರೋಪಿಗಳು ಇನ್ನೊಬ್ಬ ಆರೋಪಿಯ ಜೊತೆ ಸೇರಿ ಮಾಲನ್ನು ಸಾಗಿಸಿರುವುದಾಗಿ ತಿಳಿಸಿದ ಮೇರೆಗೆ ನನ್ನನ್ನು ಮತ್ತು ಚಾಸಾ.10 ರವರನ್ನು 4 ನೇ ಆರೋಪಿಯ ಪತ್ತೆಗಾಗಿ ಚಾಸಾ.13 ರವರು ನೇಮಕ ಮಾಡಿದ ಮೇರೆಗೆ ಬಣಕಲ್ ಟೌನ್ ನಲ್ಲಿ ಗಸ್ತು ತಿರುಗುವಾಗ ಬಣಕಲ್ ನ ಮತ್ತಿಕಟ್ಟೆ ಸರ್ಕಲ್ ನಲ್ಲಿ 4 ನೇ ಆರೋಪಿ ಮೋಹನ್ ಮತ್ತು

ಆಟೋ ಪತ್ತೆಯಾಗಿರುತ್ತದೆ. 4 ನೇ ಆರೋಪಿ ಮತ್ತು ಆಟೋ ಸಂಖ್ಯೆ ಕೆ.ಎ.18/ಬಿ.5777 ಅನ್ನು ಬೆಳಿಗ್ಗೆ 9.00 ಗಂಟೆಯ ಸುಮಾರಿಗೆ ವಶಕ್ಕೆ ಪಡೆದು, 9.15 ರ ಸುಮಾರಿಗೆ ಚಾಸಾ.13 ರವರ ಮುಂದೆ ಹಾಜರು ಪಡಿಸಿರುತ್ತೇವೆ. ಆರೋಪಿತರನ್ನು ಮತ್ತು ಆಟೋವನ್ನು ಚಾಸಾ.13 ರವರ ವಶಕ್ಕೆ ವರದಿಯೊಂದಿಗೆ ನೀಡಿರುತ್ತೇವೆ. ಸಾಕ್ಷಿ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.14 ಎಂದು ಗುರುತಿಸಲಾಯಿತು. ಈ ಕೇಸಿನ ಆರೋಪಿಗಳನ್ನು ಮತ್ತು ಆಟೋವನ್ನು ಪುನಃ ನೋಡಿದರೆ ಗುರುತಿಸಬಲ್ಲೆ.

**ಮರು ವಿಚಾರಣೆಃ** ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)
ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ